# ರಾಮಚಂದ್ರನಿಗೆ ವಧುಪರೀಕ್ಷೆಯ ನೆನಪು

ರಾತ್ರಿಯ ಹತ್ತೂವರೆಗೆ ಮನೆ ತಲುಪಿದ ರಾಮಚಂದ್ರ ಹೊಟ್ಟೆ ಚುರುಗುಟ್ಟುತ್ತಿದ್ದರೂ ಆ ಹೊತ್ತಿನಲ್ಲಿ ತನಗಾಗಿ ಅನ್ನ ಬೇಯಿಸಿ ಕೊಳ್ಳಲು ಮನಸ್ಸು ಬರದೆ ಒಂದು ಮುಷ್ಟಿ ಅವಲಕ್ಕಿ ನೆನೆಸಿ ಮೊಸರು, ಸಕ್ಕರೆ ಬೆರೆಸಿ ತಿನ್ನುವ ಯೋಚನೆಯಲ್ಲಿ ಕೈಕಾಲು ತೊಳೆದು ಅಡಿಗೆ ಮನೆ ಹೊಕ್ಕ. ಮಗ ತಂದು ಕೊಟ್ಟು ಹೋದ ಕೈಚೀಲದಲ್ಲಿ ತಕ್ಷಣಕ್ಕೆ ಹಸಿವು ಇಂಗಿಸಿ ಕೊಳ್ಳುವಂತಾದ್ದೇನಾದರೂ ಇದ್ದರೆ ಈ ರಾತ್ರಿಯ ಮಟ್ಟಿಗೆ ಅದೇ ಸಾಕು ಅನಿಸಿತು.

